ಏನಿದ್ದರೂ ಮೌಖಿಕ ಪರಂಪರೆಗೆ ಸೇರಿದ್ದು; ಲಿಖಿತ ಇತಿಹಾಸಕ್ಕೆ ವೈಜ್ಞಾನಿಕ ಉತ್ಖನನದಲ್ಲಿ ದೊರೆತ ಪ್ರಮಾಣಗಳು ಸತ್ಯ; ಅಲಿಖಿತ ಇತಿಹಾಸಕ್ಕೆ ಅನುಭವವೇ ಪ್ರಮಾಣ; ಮೊದಲನೆಯದು ಸ್ವಸಮರ್ಥನೆಯ ಇತಿಹಾಸ; ಎರಡನೆಯದು ಸ್ವವಿಮರ್ಶೆಯದು. 'ಮೃಗಶಿರ'ದಲ್ಲಿ ಸುಬ್ರಾಯಪ್ಪನ ಜೀವನ ಲಿಖಿತ ಇತಿಹಾಸದ ಒಂದು ಭಾಗ; ಅಂತೆಯದ್ದು ಲಿಖಿತ ಇತಿಹಾಸವನ್ನು ಪರೋಕ್ಷವಾಗಿ ಪ್ರಶ್ನಿಸುವ ಅಲಿಖಿತ ಇತಿಹಾಸ; ಇಲ್ಲಿ ಸತ್ಯ ಒಂದಲ್ಲ; ಅದನ್ನು ಹಲವು ರೂಪಗಳಲ್ಲಿ ಕಾಣಬಹುದು; ಕಾದಂಬರಿಯಲ್ಲಿ ಲಿಖಿತ ಮತ್ತು ಅಲಿಖಿತ ಇತಿಹಾಸಗಳು ಪರಸ್ಪರ ಸಂಧಿಸುತ್ತವೆ ಎಂದುಕೊಂಡಿರುವೆ; ಕಾದಂಬರಿಯಲ್ಲಿ ಇತಿಹಾಸದ ಎರಡೂ ಆವೃತ್ತಿಗಳು–ಗೆದ್ದವರ ಮತ್ತು ಸೋತವರ ಇತಿಹಾಸಗಳು–ಪರಸ್ಪರ ಸಂಧಿಸಿ, ಸಂವಾದಿಸುತ್ತವೆ ಎಂದು ತಿಳಿದಿದ್ದೇನೆ.

◆ **ಪ್ರಾಯಶಃ ಇತ್ತೀಚಿನ ಕೆಲವು ವರ್ಷಗಳಲ್ಲಿ ಸಣ್ಣಕತೆ ಅತಿ ಹೆಚ್ಚು ಲೇಖಕರನ್ನು ಆಕರ್ಷಿಸಿದಂತಿದೆ, ಅಲ್ಲವೆ? ಪ್ರತಿ ತಿಂಗಳು ನೂರಾರು ಕತೆಗಳು ಪ್ರಕಟವಾಗುತ್ತಿವೆ. ಆದರೆ ಸಿದ್ಧ ಸೂತ್ರಗಳಿಗೆ ಅಂಟಿಕೊಂಡವು, ಇಲ್ಲವೆ ಸಿದ್ಧಾಂತ ನಿರ್ದೇಶಿತ ಕತೆಗಳೇ ಹೆಚ್ಚಾಗಿ ಕಾಣಿಸುತ್ತವೆ.**

ನೀವು ಹೇಳುವುದರಲ್ಲಿ ಸತ್ಯವಿದೆ. ಹೊಸ ತಲೆಮಾರಿನ ಹಲವು ಕತೆಗಾರರ ಲೋಕಾನುಭವ ಓದುಗನ ಮನಸಿನಲ್ಲಿ ಇಂಗದೆ ಹಾಗೆಯೇ ಹರಿದು ಹೋಗುತ್ತದೆ ಎಂಬ ಅತೃಪ್ತಿ ನನ್ನ ಕಾಡಿದೆ; ಇದಕ್ಕೆ ಕಾರಣಗಳಿಲ್ಲದಿಲ್ಲ; ಜೀವನ ನನಗೆ ನೀಡಿದ ದರ್ಶನವನ್ನು ವಿವರಿಸುವ ಚಿತ್ರವನ್ನು ಕೊಡುತ್ತೇನೆ ಎಂದ ಮಾಸ್ತಿಯವರ ಮಾತು ಅನೇಕರಿಗೆ ಅರ್ಥವಾಗಿಲ್ಲವೇನೊ. ವಿವರಗಳನ್ನು ನೀಡದೆ ವಿವರಣೆಗೆ ತೊಡಗುವವರೇ ಹೆಚ್ಚು; ಕತೆಗಾರನ ಕೆಲಸ ಕಾಣಿಸುವುದಷ್ಟೇ. ತಿಳಿವಳಿಕೆಗೆ ಅಗತ್ಯವಾದ ನೆರವು ನೀಡುವುದೇ ಹೊರತು ತೀರ್ಪು ನೀಡುವುದಲ್ಲ; ಕಥಾವಸ್ತು ನಿರೂಪಣೆಯಲ್ಲಿ ನಿಜವಾಗುವ ಮಾಂತ್ರಿಕತೆಯನ್ನು ಸಾಧಿಸುವುದು ಅಗತ್ಯ. ತಂತ್ರವೆಂದರೆ ಕಥಾವಸ್ತುವಿನ ಹಲವು ಆಯಾಮಗಳನ್ನು ಕಥಿಸುವುದೇ ಅಲ್ಲವೆ? ಸೂಕ್ಷ್ಮ ಪಂಚೇಂದ್ರಿಯಗಳ ಕಥನ ಶರೀರವನ್ನು ನಿರ್ಮಿಸಿ, ಪೋಷಿಸಲಾರದ ಕತೆಗಾರ ಕತೆಯ ಪ್ರಾಣ ಹಾರಿ ಹೋಗದಂತೆ ಹೇಗೆ ತಡೆಯಬಲ್ಲ? ಪರಿಚಿತ ಜಗತ್ತಿನಲ್ಲೇ ಅಪರಿಚಿತ ವಿಸ್ಮಯಗಳನ್ನು ಕಾಣಿಸುವ, ಸಾಮಾನ್ಯ ಸಂಗತಿಗಳಲ್ಲೇ ಅಸಮಾನ್ಯವಾದದನ್ನು ಪ್ರಕಟಿಸುವ ಪ್ರತಿಭೆ ಇಂದಿನ ಅಗತ್ಯವೆಂದನಿಸುತ್ತದೆ. ಕತೆ ಇರುವುದು ಹೊರಗೆ; ಅದನ್ನು ಒಳಗೆ ಕಾಣಬೇಕು ಎಂಬ ಅಂಶ ಕಥನದ ಆಧ್ಯಾತ್ಮಿಕ ಪರಿಭಾಷೆಯಾಗಿ ನಮಗೆ ಕಾಣಬೇಕಿಲ್ಲ.

◆ **ಮೂರು ದಶಕಗಳ ಕಾಲ ಶಿಕ್ಷಕರ ತರಬೇತಿಯಲ್ಲಿ ತೊಡಗಿಸಿಕೊಂಡವರು ನೀವು. ಸದ್ಯ ರಾಜ್ಯದಲ್ಲಿರುವ ಎಲ್ಲ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ಪಠ್ಯಕ್ರಮ, ಪಠ್ಯ ಪುಸ್ತಕ ಜಾರಿಗೆ ತರುವುದಕ್ಕೆ ಉನ್ನತ ಶಿಕ್ಷಣ ಇಲಾಖೆ ಸಿದ್ಧತೆ ನಡೆಸಿದೆ.**

ಇದು ದುರದೃಷ್ಟಕರ. ವಿವಿಧ ಸಂಸ್ಕೃತಿಗಳ, ಬಹುಭಾಷಿಕ ಭಾರತದಲ್ಲಿ ಏಕರೂಪ ಭಾಷಾ ಪಠ್ಯಕ್ರಮವನ್ನು ಹೇರುವುದು ಪ್ರಜಾಪ್ರಭುತ್ವವನ್ನು ವಿರೋಧಿಸಿದಂತೆಯೇ. ದೇಶದ ಐಕ್ಯತೆಯನ್ನೇ ಏಕರೂಪತೆ ಎಂದು ಭಾವಿಸಿದ ಹಾಗೆ ಕಾಣುತ್ತಿದೆ; ವೈವಿಧ್ಯತೆಗಳಲ್ಲಿ ಅಂತರ್ಗತವಾಗಿರುವ ಸಮಾನ ಸಂವೇದನೆಗಳನ್ನು ಗುರುತಿಸುವುದೇ ಬಹುರೂಪತೆ.

◆ **ಶಿಕ್ಷಣ ನೀತಿ ರೂಪಿಸುವವರಿಗೆ ಭಾಷಾ ಬೋಧನೆಯ ಉದ್ದೇಶದ ಕುರಿತೇ ಸರಿಯಾದ ಕಲ್ಪನೆ ಇದ್ದಂತಿಲ್ಲ.**

ಭಾಷೆಯ ಕುರಿತು ಕೆಲವು ಅಪಗ್ರಹಿಕೆಗಳಿವೆ. ಭಾಷಾ ಬೋಧನೆಯ ಉದ್ದೇಶ ಮತ್ತು